ಕಡಿಮೆ ಇದ್ದ ಕಾಲೇಜಿನಿಂದ ಒಂದು ದ್ವಿತೀಯ ದರ್ಜೆ ಸಹಾಯಕರ ಹುದ್ದೆಯನ್ನು ಸ್ಥಳಾಂತರಿಸಲಾಗಿದೆ. ಈ ಹುದ್ದೆಗಳಿಗೆ ಎದುರಾಗಿ ಪ್ರಸ್ತುತ 01 ಅಧೀಕ್ಷಕರು 01 ಪ್ರಥಮ ದರ್ಜೆ ಸಹಾಯಕರು, 02 ದ್ವಿತೀಯ ದರ್ಜೆ ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಸದರಿ ಕಾಲೇಜಿಗೆ ಒಂದು ಬೆರಳಚ್ಚುಗಾರರ, 02 ಅಟೆಂಡರ್ ಹುದ್ದೆಗಳು ಮಂಜೂರಾಗಿದ್ದು, 01 ಅಟೆಂಡರ್ ಮತ್ತು 02 ಪರಿಚಾರಕರ ಹುದ್ದೆಯನ್ನು ಸ್ಥಳಾಂತರಿಸಲಾಗಿದೆ. ಪ್ರಸ್ತುತ 03 ಅಟೆಂಡರ್ ಹಾಗೂ 02 ಪರಿಚಾರಕರು ಕಾರ್ಯನಿರ್ವಹಿಸುತ್ತಿದ್ದಾರೆ. ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ಜರುಗಿಸಲಾಗುತ್ತಿದೆ.

833 (1192) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಾಂತ್ರಿಕ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳು ಅತ್ಯಧಿಕ ಹಣ ವೆಚ್ಚ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರ ನಿವಾರಣೆಗೆ ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಈ ಸಾಲಿನಲ್ಲಿ ಹೊಸದಾಗಿ ಮಂಜೂರಾತಿ ನೀಡಲಾಗುವುದೇ;

ಇ) ಹೊಸ ಪಾಲಿಟೆಕ್ನಿಕ್‌ನ್ನು ಕಾಪು ವ್ಯಾಪ್ತಿಯಲ್ಲಿ ತೆರೆಯಲು ಸರ್ಕಾರ ಉತ್ಸುಕವಾಗಿದೆಯೇ?

ಶ್ರೀ ಡಿ.ಹೆಚ್. ಶಂಕರ ಮೂರ್ತಿ (ಉನ್ನತ ಶಿಕ್ಷಣ ಸಚಿವರು):

ಅ) ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶ ಪಡೆಯುವ ಅಭ್ಯರ್ಥಿಗಳಿಗೆ ಕೆಳಕಂಡಂತೆ ಶುಲ್ಕ ನಿಗದಿಪಡಿಸಲಾಗಿದೆ.

| | ರೂ.ಗಳಲ್ಲಿ |
|---|---|
| ಸರ್ಕಾರಿ ಪಾಲಿಟೆಕ್ನಿಕ್ | 3,010–00 |
| ಅನುದಾನಿತ ಪಾಲಿಟೆಕ್ನಿಕ್, | 4510–00 |
| ಖಾಸಗಿ ಪಾಲಿಟೆಕ್ನಿಕ್ | |
| (1) ಕರ್ನಾಟಕ ಅಭ್ಯರ್ಥಿಗಳಿಗೆ | 8,310–00 |
| (2) ಕರ್ನಾಟಕೇತರ ಅಭ್ಯರ್ಥಿಗಳಿಗೆ | 12,810–00 |

ಮೇಲೆ ನಿಗದಿಪಡಿಸಿರುವ ಶುಲ್ಕವನ್ನು ಹೊರತುಪಡಿಸಿ ಹೆಚ್ಚಿನ ಹಣ ಖರ್ಚು ಮಾಡುತ್ತಿರುವ ಬಗ್ಗೆ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

ಆ) ಇಲ್ಲ.

ಇ) ಪ್ರಶ್ನೆಗೆ ನೀಡಿದ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

834 (1312) ಶ್ರೀ ಎಂ. ಮಹದೇವ (ಕೃಷ್ಣರಾಜಸಾಗರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಾಥಮಿಕ ಶಾಲಾ ಹಂತದಲ್ಲಿಯೇ ಆಂಗ್ಲ ಮಾಧ್ಯಮ ಬೋಧನೆಗೆ ಸರ್ಕಾರವು ಮುಂದಾಗಿರುವುದೇ;

ಆ) ಹಾಗಿದ್ದಲ್ಲಿ, ಇದನ್ನು ಯಾವ ವರ್ಷದಿಂದ ಜಾರಿಗೆ ತರಲು ಸರ್ಕಾರವು ಚಿಂತಿಸಿದೆ;

ಇ) ರಾಜ್ಯದ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಬೋಧನೆಯ ವಿಷಯದಲ್ಲಿ ಭಿನ್ನ ರೀತಿಯ ನಿಲುವನ್ನು ಸರ್ಕಾರವು ತಾಳಿರುವುದೇ;

ಈ) ಹಳ್ಳಿ ಮತ್ತು ನಗರ ಪ್ರದೇಶಗಳಲ್ಲಿನ ಶೈಕ್ಷಣಿಕ ಗುಣಮಟ್ಟದಲ್ಲಿನ ಅಂತರವನ್ನು ಸರ್ಕಾರವು ಗಮನಿಸಿದೆಯೇ;

ಉ) ಹಾಗಿದ್ದಲ್ಲಿ, ಈ ತಾರತಮ್ಯ ನಿವಾರಣೆಗೆ ಸರ್ಕಾರವು ಯಾವ ರೀತಿಯಲ್ಲಿ ಆಲೋಚಿಸಿದೆ?

ಶ್ರೀ ಬಿ. ಎಸ್. ಹೊರಟ್ಟಿ ( ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ದಿನಾಂಕ 29.4.1994 ರ ಸರ್ಕಾರದ ಆದೇಶ ಸಂಖ್ಯೆ ಇಡಿ 28 ಪಿಜಿಸಿ 94, ಇದನ್ನು ದಿ: 30.5.2002 ರ ಸರ್ಕಾರದ ಆದೇಶ ಸಂಖ್ಯೆ ಇಡಿ 44 ಪಿಜಿಸಿ 02 ಇದರೊಂದಿಗೆ ಓದಿಕೊಂಡಂತೆ, ಈ ಆದೇಶಗಳ ಪ್ರಕಾರ 1 ರಿಂದ 5ನೇ ತರಗತಿಯವರೆಗೆ ಕಲಿಕೆಯ ಮಾಧ್ಯಮ ಮಾತೃಭಾಷೆ ಅಥವಾ ಕನ್ನಡವಾಗಿರತಕ್ಕದ್ದೆಂದು ಸರ್ಕಾರದ ನೀತಿಯಾಗಿದೆ. ಆದುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) (ಅ)ಗೆ ನೀಡಿದ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲ್ಲ

ಈ) ಹೌದು

ಉ) ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿನ ಶೈಕ್ಷಣಿಕ ಗುಣಮಟ್ಟವನ್ನು ಉತ್ತಮಪಡಿಸಲು, ಶಾಲೆಗಳಲ್ಲಿ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಅಗತ್ಯವಾದ ಎಲ್ಲಾ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶದ ಮಕ್ಕಳ ಶೈಕ್ಷಣಿಕ ಗುಣಮಟ್ಟ ಸುಧಾರಿಸಿದ್ದು, ಗ್ರಾಮೀಣ ಪ್ರದೇಶದ ಮಕ್ಕಳ ಪರೀಕ್ಷಾ ಫಲಿತಾಂಶವು ಸಹ ಉತ್ತಮವಾಗಿ ಮೂಡಿಬರುತ್ತಿದೆ.